# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

---

ದಿನಾಂಕ: 24-07-2018 ರಂದು ಮಾನ್ಯ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ಮತ್ತು ಸಮಿತಿಯ ಸದಸ್ಯರು ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಪಶ್ಚಿಮ ವಲಯ ಕಛೇರಿಯ ಕೆಂಪೇಗೌಡ ಪೌರ ಸಭಾಂಗಣ, ಕೊಠಡಿ ಸಂಖ್ಯೆ 109 ರಲ್ಲಿ ಬೆಳಗ್ಗೆ 11.00 ಗಂಟೆಗೆ ಪಶ್ಚಿಮ ವಲಯ ವ್ಯಾಪ್ತಿಯ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯ ನಡವಳಿಕೆಗಳು

| ಕ್ರ ಸಂ | ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ | |
|---|---|---|
| 1 | ಶ್ರೀ. ರಮೇಶ್. ಎನ್ | ಅಧ್ಯಕ್ಷರು |
| 2 | ಡಾ||.ಎಸ್. ರಾಜು | ಸದಸ್ಯರು |
| 3 | ಶ್ರೀ. ಮೋಹನ್ ಕುಮಾರ್ | ಸದಸ್ಯರು |
| 4 | ಶ್ರೀಮತಿ. ಭಾಗ್ಯಲಕ್ಷ್ಮೀ | ಸದಸ್ಯರು |
| 5 | ಶ್ರೀ.ಕೆ.ವಿ. ರಾಜೇಂದ್ರ ಕುಮಾರ್ | ಸದಸ್ಯರು |
| 6 | ಶ್ರೀ.ಆರ್.ಎಸ್. ಸತ್ಯ ನಾರಾಯಣ್ | ಸದಸ್ಯರು |
| 7 | ಶ್ರೀ.ಬಿ.ಎನ್. ಮಂಜುನಾಥ್ ರೆಡ್ಡಿ | ಸದಸ್ಯರು |
| 8 | ಶ್ರೀ.ಮತಿ. ಶೋಭಾಗೌಡ | ಸದಸ್ಯರು |

ಜಂಟಿ ಆಯುಕ್ತರು (ಪಶ್ಚಿಮ) ರವರು ಸಭೆಯಲ್ಲಿ ಉಪಸ್ಥಿತರಿಲ್ಲದ ಕಾರಣ ಮಾನ್ಯ ಅಧ್ಯಕ್ಷರು ಅಸಮಾಧಾನ ವ್ಯಕ್ತ ಪಡಿಸಿದರು ಮಾನ್ಯ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ಹಾಗೂ ಸಮಿತಿಯ ಸದಸ್ಯರನ್ನು ಸ್ವಾಗತಿಸುತ್ತಾ, ಕಂದಾಯ, ಕಾಮಗಾರಿ, ಲೆಕ್ಕಪತ್ರ ಇಲಾಖೆ ಹಾಗೂ ಇತರೆ ಇಲಾಖೆಗೆ ಸಂಬಂಧಪಟ್ಟಂತೆ ಎಲ್ಲಾ ಅಧಿಕಾರಿಗಳ ಪರಿಚಯ ಹಾಗೂ ಇಲಾಖೆಯ ಕಾರ್ಯನಿರ್ವಹಣೆ ಕುರಿತಂತೆ ಸಭೆಗೆ ತಿಳಿಸಲು ಸೂಚಿಸಿದ ಮೇರೆಗೆ ಎಲ್ಲಾ ಅಧಿಕಾರಿಗಳು ತಮ್ಮ ತಮ್ಮ ಪರಿಚಯ ಮಾಡಿಕೊಂಡರು.

ಮಾನ್ಯ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ಮಾತಾನಾಡುತ್ತಾ, ಪಶ್ಚಿಮ ವಲಯ ವ್ಯಾಪ್ತಿಗೆ ಸಂಬಂಧಿಸಿದಂತೆ 2006-07 ರಿಂದ 2013-14ನೇ ಸಾಲಿನವರೆಗೂ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ಮತ್ತು ವಸೂಲಾತಿ ಮೊತ್ತದ ಬಗ್ಗೆ ಪರಿಶೀಲನೆಗಾಗಿ ಸಭೆಯನ್ನು ಕರೆದಿರುವುದಾಗಿ ತಿಳಿಸಿದರು.

ಜಂಟಿ ಆಯುಕ್ತರು (ಪಶ್ಚಿಮ) ರವರು ಕಂದಾಯ ಇಲಾಖೆ, ಕಾಮಗಾರಿ ಇಲಾಖೆ, ಆರೋಗ್ಯ ಇಲಾಖೆ, ನಗರಾಯೋಜನಾ ಇಲಾಖೆ ಹಾಗೂ ಇನ್ನಿತರ ಇಲಾಖೆಯ ಬಟವಾಡೆ ಅಧಿಕಾರಿಗಳಿಗೆ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿಟ್ಟಿರುವ ವಸೂಲಾತಿ ಮೊತ್ತವನ್ನು (5) ದಿನಾದೊಳಗಾಗಿ ವಸೂಲಾತಿ ಮಾಡಿ ವರದಿಯನ್ನು ನೀಡಲು ಸಮಿತಿಯ ಸಮಕ್ಷಮದಲ್ಲಿ ಸೂಚಿಸಿದರು.

ಕಾಮಗಾರಿ ಇಲಾಖೆಗೆ ಸಂಬಂಧಪಟ್ಟಂತೆ, ವಸೂಲಾತಿಯಲ್ಲಿ ಅಡಚಣೆ ಉಂಟಾಗುತ್ತಿರುವ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಸಭೆಗೆ ತಿಳಿಸಿದರು. ತತ್ಸಂಬಂಧವಾಗಿ ಮಾನ್ಯ ಅಧ್ಯಕ್ಷರು ಮಾತಾನಾಡುತ್ತಾ, ಗುತ್ತಿಗೆದಾರರು ವಿವಿಧ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರು ಈಗ ಬೇರೆ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅವರಿಂದ ಬರಬೇಕಾದ Royalty ಮೊತ್ತ ಹಾಗೂ ಇತರೆ ಮೊತ್ತಗಳನ್ನು ವಸೂಲಾತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಮು.ತಿ.ನೋ

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಹಾಗೂ, ಸದರಿಯವರು ಕಾರ್ಯನಿರ್ವಹಿಸುತ್ತಿರುವ ಕಾಮಗಾರಿ ಬಿಲ್ಲುಗಳನ್ನು ಆನ್‌ಲೈನ್‌ನಲ್ಲಿ ಜನ್‌ರೇಟ್ ಮಾಡಿ ಆಡಿಟ್ ವಸುಲಾತಿಗಳನ್ನು ಕಟಾವು ಮಾಡಿ ಬಿಲ್ ಪಾಸ್ ಮಾಡಲು ಮುಖ್ಯ ಲೆಕ್ಕಾಧಿಕಾರಿಗಳು ಸಭೆಗೆ ತಿಳಿಸಿದರು ಹಾಗೂ ಸದರಿ ವರದಿಯನ್ನು ಸಮಿತಿಗೂ ಸಲ್ಲಿಸಲು ಸೂಚಿಸಿದರು.

ಕಂದಾಯಾಧಿಕಾರಿ ಮಾರುಕಟ್ಟೆ ವಿಭಾಗದಲ್ಲಿ ಅಂಗಡಿ ಮತ್ತು ವಾಣಿಜ್ಯ ಕೇಂದ್ರಗಳ ಬಾಕಿ ಉಳಿದಿರುವ ಬಾಡಿಗೆ ವಸೂಲಿಸಲು ಸಮಿತಿಯು ಸೂಚಿಸಿತ್ತು. ಬಿ.ಬಿ.ಎಂ.ಪಿ, ವಾರ್ಡ್‌ಗಳಲ್ಲಿ ರಸ್ತೆ ಎರಡು ಬದಿಗಳಲ್ಲಿ ಗಿಡಗಳನ್ನು ನೆಟ್ಟು ನಿರ್ವಹಣೆಗೆ ಟೆಂಡರ್ ನೀಡಲಾಗಿದೆ. ಗಿಡಗಳ ಸ್ಥಿತಿಗತಿಗಳನ್ನು ಪರಿಶೀಲಿಸಿ ಟೆಂಡರ್ ಕರಾರಿನಂತೆ ನಿರ್ವಹಿಸಲು ಗುತ್ತಿಗೆದಾರರಿಗೆ ತಿಳಿಸಿ ಕ್ರಮಕೈಗೊಳ್ಳಲು ವಲಯದ ಅರಣ್ಯಾಧಿಕಾರಿಗಳಿಗೆ ಸೂಚಿಸಿದರು. ಹಾಗೂ ಒಂದು ಗಿಡಗಳಿಗೆ ತಗಲುವ ವೆಚ್ಚದ ಬಗ್ಗೆ ದರದ ವಿವರಗಳನ್ನು ತಿಳಿದು ಹೆಚ್ಚಿಗೆ ನೀಡಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ತೋಟಗಾರಿಕೆ ವಿಭಾಗದಲ್ಲಿ ವಾರ್ಡ್‌ಗಳಲ್ಲಿ ಪಾರ್ಕ್‌ಗಳ ನಿರ್ವಹಣೆಗೆ ಬಿಲ್ ಪಾವತಿಯಾಗುತ್ತಿದ್ದು, ಪಾರ್ಕ್‌ಗಳ ಸ್ಥಿತಿಗತಿಗಳನ್ನು ನಿರ್ವಹಣೆಗೆ ಅಸಮಾಧಾನ ವ್ಯಕ್ತ ಪಡಿಸುತ್ತಾ, ಸಂಪೂರ್ಣ ವಿವರಗಳನ್ನು ಸಮಿತಿಗೆ ಸಲ್ಲಿಸಲು ಸೂಚಿಸಿದರು. ಕೆ.ಆರ್.ಡಿ.ಎಲ್. ಸಂಸ್ಥೆ ಬಿ.ಬಿ.ಎಂ.ಪಿಯ ಕಾಮಗಾರಿ ಗುತ್ತಿಗೆ ನೀಡುತ್ತಿದ್ದು, ಸುಮಾರು ಶೇ 30 ರಷ್ಟು ವೆಚ್ಚವನ್ನು ಇತರೇ ಶುಲ್ಕವಾಗಿ ನೀಡುತ್ತಿದ್ದು, ಇದರಿಂದ ಬಿ.ಬಿ.ಎಂ.ಪಿಗೆ ಹೊರೆಯಾಗಿದ್ದು, ಸಂಸ್ಥೆಯೇ ಟೆಂಡರ್ ಕರೆದು ಕಾಮಗಾರಿ ನಡೆಸಿದಲ್ಲಿ ಹಣ ಉಳಿತಾಯವಾಗುವುದಾಗಿ ಅಭಿಪ್ರಾಯಿಸಿ ಮುಂದಿನ ಕ್ರಮಕೈಗೊಳ್ಳಲು ತಿಳಿಸಲಾಯಿತು.

ಕಂದಾಯಾಧಿಕಾರಿ ವಿಭಾಗದಲ್ಲಿ ಮೊಬೈಲ್ ಟವರ್‌ಗಳ ಬಗ್ಗೆ ಬಾರಿ ಪ್ರಮಾಣದಲ್ಲಿ ವಸೂಲಾತಿ ಮೊತ್ತವು ಬಾಕಿ ಇದ್ದು ಉಚ್ಚ ನ್ಯಾಯಾಲಯದ ಆದೇಶದಂತೆ ದರವನ್ನು ನಿಗಧಿಪಡಿಸಿ ಕೌನ್ಸಿಲ್‌ನಲ್ಲಿ ನಿರ್ಣಯ ಕೈಗೊಂಡು ಪ್ರತ್ಯೇಕವಾಗಿ ವಿವಿಧ ಕಂಪನಿಗಳಿಗೆ ವಿಧಿಸಲು ಸಭೆಯು ಸೂಚಿಸಿತ್ತು. ಕಂದಾಯ ಮತ್ತು ನಗರಯೋಜನೆ ವಿಭಾಗದಲ್ಲಿ ಬಹುಮಹಡಿ ಕಟ್ಟಡಗಳಿಗೆ ಹಾಗೂ ಖಾಲಿ ನಿವೇಶನಗಳಿಗೆ ಅಭಿವೃದ್ಧಿ ಶುಲ್ಕ ಮತ್ತು ಸುಧಾರಣ ವೆಚ್ಚ ಹಾಗೂ ಕಂದಾಯ ನಿಗಧಿಪಡಿಸಿ ವಸೂಲಿಸಲು ಕ್ರಮಕೈಗೊಳ್ಳುವಂತೆ ವಸತಿಗಳ ಸರ್ವೆ ಮಾಡಲು ತಿಳಿಸಿ ಬಾಕಿ ಇರುವ ಲೆಕ್ಕಪರಿಶೋಧನಾ ವರದಿಯಲ್ಲಿ ಇರುವಂತೆ ವಸೂಲಾತಿ ಮೊತ್ತವನ್ನು ವಸೂಲಿಸಲು ಸಮಿತಿಯು ಸೂಚಿಸಿತ್ತು. ಹಾಗೂ ವಲಯದ ಕಂದಾಯ ಮತ್ತು ನಗರಯೋಜನೆ ವಿಭಾಗಳು ಜಂಟಿಯಾಗಿ ಕಾರ್ಯನಿರ್ವಹಿಸಲು ಸೂಚಿಸಿತ್ತು.

ವಲಯದ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಸಮಿತಿಯು ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಬಗ್ಗೆ ಕ್ರಮ ವಹಿಸುವಂತೆ ಉಪ ನಿಯಂತ್ರಕರು (ಹಣಕಾಸು) ಪಶ್ಚಿಮ ಇವರಿಗೆ ಅಧ್ಯಕ್ಷರು ತಿಳಿಸಿದರು

ವಾಣಿಜ್ಯ ಪ್ರದೇಶದಲ್ಲಿ ಎಲ್ಲಾ ವಾಣಿಜ್ಯ ಚಟುವಟಿಕೆ ನಡೆಸುತ್ತಿರುವ ಉದ್ದಿಮೆದಾರರಿಗೆ ಪರವಾನಗಿಯನ್ನು ನೀಡಲು ಮೇಳವನ್ನು ಆಯೋಜಿಸಲು ಎಲ್ಲಾ ಆರೋಗ್ಯ ವೈದ್ಯಾಧಿಕಾರಿಗಳಿಗೆ ಸಭೆಯಲ್ಲಿಯೇ ಸೂಚಿಸಿದರು. ಸಮಿತಿಯ ಸದಸ್ಯರು ಮಾತಾನಾಡುತ್ತಾ, ವಾಣಿಜ್ಯ ಪ್ರದೇಶದಲ್ಲಿ ವಾಣಿಜ್ಯ ಚಟುವಟಿಕೆ ನಡೆಸುತ್ತಿರುವ ಎಲ್ಲಾ ಉದ್ದಿಮೆದಾರರಿಗೆ ಈ ಹಿಂದೆ ನೀಡಿದ ಉದ್ದಿಮೆ ಪರವಾನಗಿಯನ್ನು ಕಡ್ಡಾಯವಾಗಿ ನವೀಕರಿಸಿ ಪರವಾನಗಿಯನ್ನು ನೀಡಲು ಸೂಚಿಸಿದರು.

ಮು.ತಿ.ನೋ

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ವಲಯದ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಇವರಿಗೆ ತಿಳಿಸುತ್ತಾ, ಸ್ಟ್ರೀಟ್‌ಲೈಟ್ & ನಿರ್ವಹಣೆ ಬಿಲ್ಲುಗಳನ್ನು ಪಾವತಿಸಲಾಗುತ್ತಿದ್ದು, ಬಿ.ಬಿ.ಎಂ.ಪಿ ವಿವಿಧ ಕಡೆಗಳಲ್ಲಿ ಅಳವಡಿಸಲಾದ ವಿದ್ಯುತ್ ದ್ವೀಪಗಳನ್ನು ಪರಿಶೀಲಿಸಲಾಗಿ, ಕಾರ್ಯನಿರ್ವಹಿಸದ ಕಾರಣ ಸಮಿತಿಯು ಅಸಮಾಧಾನ ವ್ಯಕ್ತಪಡಿಸುತ್ತಾ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದರು.

ಸಮಿತಿಯು ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ ಮಾಡುತ್ತಿರುವ ಬಗ್ಗೆ ಸಭೆಗೆ ತಿಳಿಸಲು ತಿಳಿಸಿದ ಹಿನ್ನೆಲೆಯಲ್ಲಿ ಆಟೋರಿಕ್ಷ, ಕಾರು, ಲ್ಯಾಪ್‌ಟಾಪ್, ಸ್ಕಾಲರ್‌ಶೀಫ್, ಒಂಟಿ ಮನೆ ನಿರ್ಮಾಣ ಸಂಬಂಧಪಟ್ಟಂತೆ ಪ್ರಗತಿಯ ವರದಿಗಳನ್ನು ಚರ್ಚಿಸಿದರು

ಅಂತಿಮವಾಗಿ ಅಧ್ಯಕ್ಷರು ಅಧಿಕಾರಿಗಳನ್ನು ಉದ್ದೇಶಿಸಿ, ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆ ಮತ್ತು ವಸೂಲಾತಿಗೆ ಸಂಬಂಧಿಸಿದಂತೆ, ಉತ್ತರಗಳನ್ನು ನೀಡಲು ಸೂಚಿಸಲಾಯಿತು. ಪಾಲಿಕೆಯಿಂದ ತಾವು ಸಂಬಳ ಪಡೆಯುತ್ತಿದ್ದು, ಪಾಲಿಕೆಯ ಬೊಕ್ಕಸಕ್ಕೆ ಯಾವುದೇ ರೀತಿಯಲ್ಲಿ ನಷ್ಟವಾಗದಂತೆ ಕೆಲಸ ನಿರ್ವಹಿಸಲು ಸೂಚಿಸುತ್ತಾ, ಸೂಕ್ತ ಶಿಸ್ತು ಕ್ರಮಕೊಳ್ಳಲಾಗುವುದೆಂದು, ಸಭೆಯಲ್ಲಿ ಪ್ರಸ್ತಾಪಿಸಿರುವ ಎಲ್ಲಾ ವಿಷಯಗಳಿಗೆ ಕ್ರಮವಹಿಸಲು **ಘಟಕ ಕಛೇರಿಯ ಅಧಿಕಾರಿಗಳಿಗೆ** ತಿಳಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ

**ಪ್ರತಿಯನ್ನು:**

1) ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಲಯಕ್ಕೆ ಕಳುಹಿಸಿದೆ.
2) ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಲಯಕ್ಕೆ ಕಳುಹಿಸಿದೆ.
3) ಮಾನ್ಯ ಆಯುಕ್ತರ ಅವಗಾಹನೆಗೆ ತರಲು ಆಪ್ತ ಕಾರ್ಯಲಯಕ್ಕೆ ಕಳುಹಿಸಿದೆ.
4) ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು ಮತ್ತು ಜೆ.ಡಿ.ಎಸ್ ಪಕ್ಷದ ನಾಯಕರ ಅವಗಾಹನಗೆ ಕಳುಹಿಸಿದೆ.
5) ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳ ಅವಗಾಹನೆಗೆ ತರಲು ಆಪ್ತ ಕಾರ್ಯಲಯಕ್ಕೆ ಕಳುಹಿಸಿದೆ.
6) ಲೆಕ್ಕಪತ್ರ ಸ್ಥಾಯಿ ಸಮಿತಿಯ ಸದಸ್ಯರುಗಳಿಗೆ ಕಳುಹಿಸಿದೆ.
7) ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ ವಲಯ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸಯತ್ತಾ,ಸಮಿತಿಯ ನಡವಳಿಯನ್ನು ಪಾಲಿಕೆಯ ಅಂತರ್ಜಾಲದಲ್ಲಿ ಪ್ರಚಾರಪಡಿಸಲಿ ಕೋರಿದೆ.